**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ರಾಣೇಬೆನ್ನೂರು.**

**Crl. Misc. No.231/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಶಿವಪುತ್ರಪ್ಪ ದೊಡ್ಡಚಿಕ್ಕಣ್ಣನವರ | ***PW-4*** |
| ತಂದೆಯ ಹೆಸರು | - | ದಿಳ್ಳೆಪ್ಪ | |
| ವಯಸ್ಸು | - | 44 ವರ್ಷ | |
| ಉದ್ಯೋಗ | - | ವಕೀಲರು | |
| ವಾಸ | - | ರಾಣೇಬೆನ್ನೂರು. | |

**ದಿನಾಂಕಃ 18-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಾದ ಶ್ರೀಮತಿ.ಎಸ್.ಆರ್.ಎಸ್. ವಕೀಲರಿಂದಃ**

ನಾನು ಸುಮಾರು 7 ವರ್ಷಗಳಿಂದ ರಾಣೇಬೆನ್ನೂರಿನಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದೇನೆ. ನಜರುನ್ನಿಸಾ ನನ್ನ ಬಳಿ ಆ ಮೊದಲು ಅಫಿಡವಿಟ್ ಮಾಡಿಸಿಕೊಂಡು ಹೋಗಿದ್ದರು. ಆ ಮೂಲಕ ಅವರು ನನಗೆ ಪರಿಚಯ ಆಗಿದ್ದರು. ನಿಪಿ-3 ರ ದಾಖಲೆಯನ್ನು ನಜರುನ್ನಿಸಾ ಮತ್ತು ಮುನಿರ ಅಹಮ್ಮದ್ ರವರು ಇಬ್ಬರೂ ಸೇರಿ ತಯಾರಿಸಿಕೊಂಡು ಬಂದಿದ್ದರು. ಅವರಿಬ್ಬರು ಬಂದು ಸದರಿ ದಾಖಲೆಗೆ ನೋಟರಿ ಮಾಡಿಸಿ ಕೊಡಿ ಎಂದು ಕೇಳಿದರು. ಅವರಿಬ್ಬರು ನಾವಿಬ್ಬರು ಈಗ ಕೂಡಿಯೇ ವಾಸವಾಗಿದ್ದೇವೆ ಎಂದು ಹೇಳಿದ್ದರು. ಆ ನಂತರ ನಾನು ಅವರನ್ನು ನೋಟರಿಯವರ ಬಳಿ ಕರೆದುಕೊಂಡು ಹೋಗಿ ಅವರಿಬ್ಬರು ನಿಪಿ-3 ಕ್ಕೆ ಸಹಿ ಮಾಡಿರುತ್ತಾರೆ ಹಾಗೂ ನಾನೂ ಸಹ ನಿಪಿ-3 ಕ್ಕೆ ಸಹಿ ಹಾಕಿರುತ್ತೇನೆ ಮತ್ತು ನಿಪಿ-3 ಕ್ಕೆ ಇಬ್ಬರು ಸಾಕ್ಷಿದಾರರು ಸಹಿಯನ್ನು ಹಾಕಿರುತ್ತಾರೆ. ನಿಪಿ-3 ಕ್ಕೆ ನನ್ನ ಹೆಸರು ಬರೆದು ನಾನು ಸಹಿ ಹಾಕಿರುತ್ತೇನೆ. ಸಾಕ್ಷಿ ನಿಪಿ-3 ರ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ಇಬ್ಬರು ಪಕ್ಷಗಾರರ ಫೋಟೋಗಳನ್ನು ನಿಪಿ-3 ಕ್ಕೆ ಅಂಟಿಸಿ ನೋಟರಿ ಮಾಡಿಸಿರುತ್ತೇನೆ. ಫೋಟೋದಲ್ಲಿರುವ ವ್ಯಕ್ತಿಗಳೇ ನಿಪಿ-3 ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-3 ದಾಖಲೆಗೆ ಸಹಿ ಮಾಡಿ ಈಗ 10 ವರ್ಷ ಆಗಿರುವುದರಿಂದ ಅವರನ್ನು ಈಗ ಗುರುತಿಸಲಾಗುವುದಿಲ್ಲ.

**ಪಾಟೀ ಸವಾಲುಃ ಎದುರುದಾರನ ಪರ ವಕೀಲರಾದ ಶ್ರೀ.ಎಸ್.ಎ.ಕೆ ವಕೀಲರಿಂದ**

ನಾನು ವಕೀಲನಾಗಿ 2007 ರಲ್ಲಿ ನೊಂದಣಿ ಮಾಡಿರುತ್ತೇನೆ. ನಿಪಿ-3 ರೀತಿಯ ದಾಖಲೆಗೆ ಅಟೆಸ್ಟ ಮಾಡಬಹುದು ಎಂದು ತಿಳಿದು ಕೊಂಡು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಪಕ್ಷಗಾರರು ಮೊಹಮ್ಮದ್ ನ ಕಾಯ್ದೆಯ ಅಡಿಯಲ್ಲಿ ಆ ರೀತಿಯ ಒಪ್ಪಂದ ಮಾಡಬಹುದು ಎಂದು ತಿಳಿದು ಕೊಂಡು ಸಹಿ ಮಾಡಿರುತ್ತೇನೆ. ಮೊಹಮ್ಮದ್‌ನ ಕಾಯ್ದೆಯ ಅಡಿಯಲ್ಲಿ ಆ ರೀತಿಯನ್ನು ದಾಖಲೆಯನ್ನು ಮಾಡಬಹುದೋ ಅಥವಾ ಇಲ್ಲವೊ ಎಂದು ನಾನು ತಿಳಿದು ಕೊಂಡಿರುವುದಿಲ್ಲ. ಆ ರೀತಿಯ ದಾಖಲೆ ಕಾನೂನಿನಲ್ಲಿ ಊರ್ಜಿತವಿಲ್ಲ ಆದುದರಿಂದ ನಾನು ಸಹಿ ಮಾಡುವುದಿಲ್ಲ ಎಂದು ಹೇಳಿದ್ದೆ. ಆದರೆ ಅವರಿಬ್ಬರು ನಾವಿಬ್ಬರು ಹೊಂದಾಣಿಕೆಯಿಂದ ಇದ್ದೇವೆ ಸಹಿ ಮಾಡಬಹುದು ತೊಂದರೆ ಇಲ್ಲ ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನಿಪಿ-3 ರ ಭಾವಚಿತ್ರದಲ್ಲಿರುವ ಮುನಿರ್ ಅಹಮ್ಮದ್ ವ್ಯಕ್ತಿಯ ಪರಿಚಯ ನನಗೆ ಇರುವುದಿಲ್ಲ ಆದರೆ ಆತನನ್ನು ಅದೇ ದಿನ ಪ್ರಥಮ ಬಾರಿಗೆ ನೋಡಿರುತ್ತೇನೆ. ನನ್ನ ಮುಂದೆಯೇ ಆ ವ್ಯಕ್ತಿ ನಿಪಿ-3 ಕ್ಕೆ ಸಹಿ ಮಾಡಿರುತ್ತಾರೆ. ಪಕ್ಷಗಾರರು ದಾಖಲೆಯನ್ನು ಝುರಾಕ್ಸ ಮಾಡಿಸಿಕೊಂಡು ಬರುತ್ತೇವೆ ಎಂದು ತೆಗೆದು ಕೊಂಡು ಹೋಗಿದ್ದರಿಂದ ನೋಟರಿ ಬುಕ್ ನಲ್ಲಿ ಅದನ್ನು ಬರೆಸಿರುವುದಿಲ್ಲ. ನಿಪಿ-3 ದಾಖಲೆಯನ್ನು ಯಾರು ತಯಾರಿಸಿರುತ್ತಾರೆ ಎಂದು ಹೇಳಲಾಗುವುದಿಲ್ಲ. ನಿಪಿ-3 ರ ದಾಖಲೆಯನ್ನು ಓದಿ ಸದರಿ ಪಕ್ಷಗಾರರಿಗೆ ಹೇಳಿರುತ್ತೇನೆ.

ನಜರುನ್ನಿಸಾ ರವರಿಗೆ ಇದಕ್ಕಿಂತ ಮೊದಲು ಯಾವ ದಿನಾಂಕದಂದು ಅಫಿಡವಿಟ್ ಮಾಡಿಸಿ ಕೊಟ್ಟಿರುತ್ತೇನೆ ಎಂದು ನೆನಪಿರುವುದಿಲ್ಲ. ನಿಪಿ-3 ದಾಖಲೆಗೆ ಸಹಿ ಮಾಡಿದ ಬಗ್ಗೆ ನಾನು ಯಾವುದೇ ಶುಲ್ಕ ಪಡೆದಿರುವುದಿಲ್ಲ. ಬೇರೆಯವರು ತಯಾರಿಸಿಕೊಂಡು ಬಂದ ದಾಖಲೆ ಸರಿ ಇದ್ದರೆ ಮಾತ್ರ ಅದಕ್ಕೆ ನಾನು ಸಹಿ ಹಾಕುತ್ತೇನೆ. ಈ ರೀತಿಯ ದಾಖಲೆಯನ್ನು ಮಾಡಲು ಕಾನೂನಿನ ಅಡಿಯಲ್ಲಿ ಅವಕಾಶ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಪಿ-3 ದಾಖಲೆಗೆ ಮುನಿರ್ ಅಹಮ್ಮದ್ ನನ್ನ ಮುಂದೆ ಸಹಿ ಮಾಡಿದ್ದರು ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ದಾಖಲೆಯಲ್ಲಿರುವ ಒಪ್ಪಿಗೆದಾರರ ಸಹಿ ಅನುಕ್ರಮ ಸಂಖ್ಯೆ .2 ರಲ್ಲಿರುವ ಸಹಿ ಮುನಿರ್ ಅಹಮ್ಮದ್ ರವರ ಸಹಿ ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಅರ್ಜಿದಾರರು ಸೇರಿ ನಿಪಿ-3 ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ,**

**ರಾಣೇಬೆನ್ನೂರು.**

**Crl. Misc. No.231/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಎಸ್.ಬಿ.ದಿಂಡದಹಳ್ಳಿ | ***PW-3*** |
| ತಂದೆಯ ಹೆಸರು | - | ಬೊಮ್ಮಣ್ಣ ಅಲಿಯಾಸ್ ಭರಮಗೌಡ | |
| ವಯಸ್ಸು | - | 59 ವರ್ಷ | |
| ಉದ್ಯೋಗ | - | ವಕೀಲರು ಮತ್ತು ನೋಟರಿ | |
| ವಾಸ | - | ರಾಣೇಬೆನ್ನೂರು. | |

**ದಿನಾಂಕಃ 18-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಾದ ಶ್ರೀಮತಿ.ಎಸ್.ಆರ್.ಎಸ್. ವಕೀಲರಿಂದಃ**

ನಾನು ಸುಮಾರು 9 ವರ್ಷಗಳಿಂದ ರಾಣೇಬೆನ್ನೂರಿನಲ್ಲಿ ನೋಟರಿಯಾಗಿ ಕೆಲಸ ಮಾಡುತ್ತಿದ್ದೇನೆ. ದಿಃ 29-04-2016 ರಂದು ನಿಪಿ-3 ದಾಖಲೆಯನ್ನು ನಾನೇ ನೋಟರಿ ಮಾಡಿರುತ್ತೇನೆ. ನಜರುನ್ನಿಸಾ ಮತ್ತು ಮುನಿರ ಅಹಮ್ಮದ್ ರವರನ್ನು ಎಸ್.ಡಿ.ದೊಡ್ಡಚಿಕ್ಕಣ್ಣನವರ ಎಂಬ ವಕೀಲರು ನಿಪಿ-3 ದಾಖಲೆಯನ್ನು ನೋಟರಿ ಮಾಡಿಸಲು ನನ್ನ ಬಳಿ ಕರೆದು ಕೊಂಡು ಬಂದಿದ್ದರು. ಸದರಿ ಪಕ್ಷದಾರರನ್ನು ಎಸ್.ಡಿ.ದೊಡ್ಡಚಿಕ್ಕಣ್ಣನವರ ಎಂಬ ವಕೀಲರು ಗುರುತಿಸಿರುತ್ತಾರೆ. ಇಬ್ಬರು ಪಕ್ಷಗಾರರು ನನ್ನ ಸಮಕ್ಷಮ ನಿಪಿ-3 ದಾಖಲೆಗೆ ಸಹಿ ಮಾಡಿರುತ್ತಾರೆ. ವಕೀಲರೂ ಸಹ ನಿಪಿ-3 ರ ದಾಖಲೆಗೆ ಸಹಿ ಮಾಡಿರುತ್ತಾರೆ. ಸಾಕ್ಷಿದಾರರೂ ಸಹ ನಿಪಿ-3 ಕ್ಕೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ನಿಪಿ-3 ದಾಖಲೆಯನ್ನು ಎಸ್.ಡಿ.ದೊಡ್ಡಚಿಕ್ಕಣ್ಣನವರ ಎಂಬ ವಕೀಲರು ತಯಾರು ಮಾಡಿಕೊಂಡು ಬಂದಿದ್ದರು. ನಾನು ಆ ದಾಖಲೆಗೆ ನೋಟರಿ ಮಾಡಿರುತ್ತೇನೆ. ಸದರಿ ದಾಖಲೆಗೆ ನಜರುನ್ನಿಸಾ ಮತ್ತು ಮುನಿರ ಅಹಮ್ಮದ್ ರವರ ಭಾವಚಿತ್ರಗಳನ್ನು ನನ್ನ ಮುಂದೆಯೇ ಅಂಟಿಸಿರುತ್ತಾರೆ. ಸಾಕ್ಷಿ ನಿಪಿ-3 ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ ಎದುರುದಾರನ ಪರ ವಕೀಲರಾದ ಶ್ರೀ.ಎಸ್.ಎ.ಕೆ ವಕೀಲರಿಂದ**</u>

ನಿಪಿ-3 ರ ಸ್ಟಾಂಪ್ ಪೇಪರನ್ನು ಯಾವ ಉದ್ದೇಶಕ್ಕೆ ಖರೀದಿಸಿದ್ದರು ಎಂದು ನಾನು ನೋಡಿರುವುದಿಲ್ಲ. ಸಾಕ್ಷಿ ಈಗ ದಾಖಲೆಯನ್ನು ನೋಡಿ ಅದರಲ್ಲಿ ಅಪಿಡವಿಟ್ ಗಾಗಿ ಸ್ಟಾಂಪ್ ಪೇಪರ ಖರೀದಿಸಲಾಗಿದೆ ಎಂದು ಬರೆದಿದೆ ಎಂದು ಹೇಳುತ್ತಾರೆ. ವಿವಾಹಕ್ಕೆ ಸಂಬಂಧಪಟ್ಟ ಒಪ್ಪಂದಗಳನ್ನು ನೋಟರಿ ಮಾಡಲು ನೋಟರಿ ಕಾಯ್ದೆಯಲ್ಲಿ ಅವಕಾಶ ಇದೆ. ನೋಟರಿ ಕಾಯ್ದೆಯ ಯಾವ ಪ್ರಾವಿಜನ್ ಅಡಿಯಲ್ಲಿ ನೋಟರಿ ಮಾಡಿದ್ದೇನೆ ಎಂದು ಈಗ ಹೇಳಲಾಗುವುದಿಲ್ಲ. ನೋಟರಿ ಕಾಯ್ದೆಯ ಕಲಂ.8 ರ ಅಡಿಯಲ್ಲಿ ನಿಪಿ-3 ರ ದಾಖಲೆಯನ್ನು ನೋಟರಿ ಮಾಡಲು ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ನೋಟರಿ ಮಾಡಿದ ದಾಖಲೆಗಳ ಬಗ್ಗೆ ಪ್ರತ್ಯೇಕ ನೋಟರಿ ರಿಜಿಸ್ಟರ ಇಡಬೇಕು ಎಂದರೆ ಸರಿ. ಪ್ರತಿ ವರ್ಷಕ್ಕೊಮ್ಮೆ ಸದರಿ ನೋಟರಿ ರಿಜಿಸ್ಟರನ್ನು Inspection ಗೆ ಹಾಜರು ಪಡಿಸುತ್ತೇನೆ. ನಿಪಿ-3 ರಲ್ಲಿ ನೋಟರಿ ರಿಜಿಸ್ಟರನ ಸಿರಿಯಲ್ ನಂಬರನ್ನು ನಮೂದು ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ಪಕ್ಷಗಾರರು ಝುರಾಕ್ಸ ಮಾಡಿಸಿಕೊಂಡು ಬಂದಿರುತ್ತೇವೆ ಎಂದು ದಾಖಲೆ ತೆಗೆದು ಕೊಂಡು ಹೋದವರು ವಾಪಸ್ಸು ಬರಲಿಲ್ಲ ಹಾಗಾಗಿ ಆ ನಂಬರನ್ನು ನಮೂದು ಮಾಡಿಲ್ಲ ಎಂದು ಹೇಳುತ್ತಾರೆ. ನಾನು ದಾಖಲೆಗೆ ಸಹಿ ಮಾಡುವ ಪೂರ್ವದಲ್ಲಿಯೇ ನೋಟರಿ ರಿಜಿಸ್ಟರನ ಸಿರಿಯಲ್ ನಂಬರನ್ನು ನಮೂದು ಮಾಡಬೇಕು ಎಂದರೆ ಸಾಕ್ಷಿ ನಾನು ದಾಖಲೆಗೆ ಸಹಿ ಹಾಕಿದ ನಂತರ ಸಿರಿಯಲ್ ನಂಬರನ್ನು ನಮೂದು ಮಾಡುತ್ತೇನೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ನಾನು ಎಲ್ಲಾ ದಾಖಲೆಗಳಿಗೆ ನೋಟರಿ ರಿಜಿಸ್ಟರ ಸಿರಿಯಲ್ ನಂಬರನ್ನು ನಮೂದು ಮಾಡುತ್ತೇನೆ. ನಿಪಿ-3 ರ ಮೊದಲ ಪುಟದಲ್ಲಿ ಪಕ್ಷಗಾರರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ನಿಪಿ-3 ರ ದಾಖಲೆಗೆ ಪ್ರತಿ ಪುಟಕ್ಕೂ ಪಕ್ಷಗಾರರ ಸಹಿ ಬೇಕು ಎಂದರೆ ಸಾಕ್ಷಿ ಅದು ಒಪ್ಪಂದ ಪತ್ರವಾಗಿರುವುದರಿಂದ ಬೇಡ ಎಂದು ಹೇಳುತ್ತಾರೆ. ಆ ರೀತಿ ಯಾವುದೇ ಕಾನೂನು ಇಲ್ಲ ನಾನೇ ಕಲ್ಪಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನೋಟರಿ ರಿಜಿಸ್ಟರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ನೋಟರಿ ರಿಜಿಸ್ಟರಗೆ ಪಕ್ಷಗಾರರ ಸಹಿ ಪಡೆದಿರುವುದಿಲ್ಲ. ಅದರಲ್ಲಿ ನಮೂದು ಮಾಡುವ ಪೂರ್ವದಲ್ಲಿಯೇ ಪಕ್ಷಗಾರರು ದಾಖಲೆಯನ್ನು ಝರಾಕ್ಸ ಮಾಡಿಸಿಕೊಂಡು ಬರುತ್ತೇವೆ ಎಂದು ತೆಗೆದು ಕೊಂಡು ಹೋಗಿದ್ದರು. ನಿಪಿ-3 ರ ಭಾವಚಿತ್ರದಲ್ಲಿರುವ ಪಕ್ಷಗಾರರು ನನಗೆ ವೈಯಕ್ತಿಕವಾಗಿ ಪರಿಚಯ ಇರುವುದಿಲ್ಲ. ನಿಪಿ-3 ರ ದಾಖಲೆಯನ್ನು ಪಕ್ಷಗಾರರು ಝರಾಕ್ಸ ಮಾಡಿಸಿಕೊಂಡು ಬರುತ್ತೇವೆ ಎಂದು ತೆಗೆದು ಕೊಂಡು ಹೋಗಿದ್ದರಿಂದ ನಾನು ನನ್ನ ಶುಲ್ಕವನ್ನು ಪಡೆದಿರುವುದಿಲ್ಲ. 2016 ರಲ್ಲಿ ನೋಟರಿ ಮಾಡಿದ ಪಕ್ಷಗಾರರನ್ನು ಈಗ ಗುರುತಿಸಲು ಆಗುವುದಿಲ್ಲ.

ದಿಃ 29-04-2016 ರಂದು ನಿಪಿ-3 ಭಾವಚಿತ್ರದಲ್ಲಿರುವ ಪಕ್ಷಗಾರರು ನನ್ನ ಸಮಕ್ಷಮ ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಅರ್ಜಿದಾರರು ಸೃಷ್ಟಿಸಿಕೊಂಡ ಸುಳ್ಳು ದಾಖಲೆಗೆ ನಾನು ಪೂರಕವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಎದುರುದಾರರಾದ ಮುನಿರ್ ಅಹಮ್ಮದ್ ಪನಿಬಂದ್ ರವರು ನಿಪಿ-3 ದಾಖಲೆಗೆ ನನ್ನ ಸಮಕ್ಷಮ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಸಂಗತಿ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.